CW.8 PW.6

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.334/2015

| | |
|---|---|
| ಸಾಕ್ಷಿದಾರರ ಹೆಸರು | ಹೊನ್ನಮಾದೇಗೌಡ |
| ತಂದೆಯ ಹೆಸರು | ಹೊನ್ನೇಗೌಡ |
| ವಯಸ್ಸು | 59 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಹಂಚಗುಳಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 09.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನೋಡಿರುವುದಿಲ್ಲ. ಚಾಸಾ-1 ರಿಂದ 7, ಚಾಸಾ-9 ರಿಂದ 14 ರವರು ಗೊತ್ತಿರುವುದಿಲ್ಲ.

ಸುಮಾರು 2015 ರಲ್ಲಿ ನಾನು ಠಾಣೆಗೆ ಹೋದಾಗ ಪೋಲೀಸರು ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ನನ್ನ ಮುಂದೆ ಯಾವುದೇ ವಸ್ತು ಅಥವಾ ವಾಹನ ಅಮಾನತು ಪಡಿಸಿಕೊಂಡಿರುವುದಿಲ್ಲ. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಅಮಾನತು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು.

CW.8 PW.6

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ದಿನಾಂಕ 29.09.2013 ರಂದು ಕೋಡಿಹಳ್ಳಿ ಪೋಲೀಸ್ ಠಾಣಾ ಆವರಣ ಮುಂಭಾಗದಲ್ಲಿ ಈಗ ವಿವರವಾಗಿ ಹೇಳಿದಂತೆ ಪೋಲೀಸರು ಸದರಿ ಅಪಘಾತಕ್ಕೆ ಒಳಗಾದ ಹಾಗೂ ಅಪಘಾತ ಪಡಿಸಿದ ವಾಹನಗಳನ್ನು ನನ್ನ ಹಾಗೂ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.15 ಗಂಟೆಯವರೆಗೂ ಈಗ ಓದಿ ಹೇಳಿದಂತೆ ಮಹಜರ್ ಮಾಡಿ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ಗೊತ್ತಿದ್ದರೂ ಸಹಿತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಏನೂ ಇರುವುದಿಲ್ಲ**

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**